# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ

## ಸಿ ಸಿ ನಂ.19/2022

**ಫಿರ್ಯಾದುದಾರರು** ಃ- ರಾಜ್ಯ ಪೋಲೀಸರು, ಹಲಗೂರು ಪೊಲೀಸ್ ಠಾಣೆ,
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಃ ವಿರುದ್ಧ ಃ

**ಆರೋಪಿತರ ಹೆಸರು** ಃ-
1) ಶ್ರೀ ವಿನಯ್ ಉಃ ವಿನೋದ್ ಕುಮಾರ್ ಹೆಚ್.ಆರ್.
ಬಿನ್ ರಾಮಕೃಷ್ಣೇಗೌಡ, 30 ವರ್ಷಗಳು,
2) ಶ್ರೀ ವಿಜಯ್ ಉಃ ವಿಜಯ್ ಕುಮಾರ್ ಕೆ.ಆರ್.
ಬಿನ್ ರಾಮಕೃಷ್ಣೇಗೌಡ, 35 ವರ್ಷಗಳು,
3) ಶ್ರೀ ರಾಮಕೃಷ್ಣೇಗೌಡ ಜೆ.
ಬಿನ್ ಲೇಟ್ ಜವರಾಯಿಗೌಡ, 74 ವರ್ಷಗಳು,
4) ಶ್ರೀಮತಿ ಇಂದ್ರಮ್ಮ ಕೋಂ ರಾಮಕೃಷ್ಣೇಗೌಡ,
65 ವರ್ಷಗಳು,

ಎಲ್ಲರ ವಾಸಃ ಹಲಗೂರು ಟೌನ್,
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

## -ಃ ದೋಷಾರೋಪಣೆ ಃ-

ಸಚಿನ್ ಕುಮಾರ್ ಶಿವಪೂಜಿ, ಬಿ.ಎ.ಎಲ್., ಎಲ್ ಎಲ್ ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಆದ ನಾನು ನಿಮ್ಮಗಳ ವಿರುದ್ಧ ಹೊರಸಿರುವ ದೋಷಾರೋಪಣೆ ಏನೆಂದರೆ ಃ

ಘನ ನ್ಯಾಯಾಲಯದ ವ್ಯಾಪ್ತಿಗೆ ಬರುವ ಮಳವಳ್ಳಿ ತಾಲ್ಲೂಕು, ಹಲಗೂರು ಟೌನ್ ನಲ್ಲಿ ವಾಸವಾಗಿರುವ ಸಾಕ್ಷಿ-01 ಮತ್ತು ಆರೋಪಿತರುಗಳಿಗೆ ನಿವೇಶನವನ್ನು ಒತ್ತುವರಿ ಮಾಡಡಿಕೊಂಡಿರುವ ಬಗ್ಗೆ ತಕರರು ಇದ್ದು, ಮಳವಳ್ಳಿ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿದ್ದು, ಈ ವಿಚಾರವಾಗಿ ದಿನಾಂಕಃ 26.05.2021 ಬೆಳಿಗ್ಗೆ 09.00 ಗಂಟೆಯ ಸಮಯದಲ್ಲಿ ಸಾಕ್ಷಿ-01 ರವರು ಮನೆಯ ಹತ್ತಿರ ಇದ್ದಾಗ, 1 ಮತ್ತು 2 ನೇ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಸಾಕ್ಷಿ-01 ರವರಿಗೆ ಅವಾಚ್ಯ ಶಬ್ದಗಳಿಂದ ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟಾಗುವಂತೆ ಬೈದು ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿದ್ದೀರೆಂದು ಹಾಗೂ

ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ, 2 ನೇ ಆರೋಪಿಯಾದ ನೀವು ಏಕೋದ್ದೇಶದಿಂದ ಸಾಕ್ಷಿ-02 ರವರನ್ನು ಅಡ್ಡಗಟ್ಟಿ ತಡೆದಿದ್ದು, ದಿನಾಂಕಃ 27.05.2021 ರಂದು ಸಂಜೆ 05.30 ಗಂಟೆ ಸಮಯದಲ್ಲಿ ಸಾಕ್ಷಿ-02 ರವರು ರವಿ ಚಿತ್ರ ಮಂದಿರದ ಬಳಿ ಬರುತ್ತಿದ್ದಾಗ, 1 ಮತ್ತು 2 ನೇ

ಆರೋಪಿತರಾದ ನೀವುಗಳು ಸಾಕ್ಷಿ-02 ರವರನ್ನು ಅಡ್ಡಗಟ್ಟಿ ತಡೆದು ಭಾರತ ದಂಡ ಸಂಹಿತೆ ಕಲಂ.341 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿದ್ದೀರೆಂದು ಹಾಗೂ

ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ, ಸಾಕ್ಷಿ-01 ರವರು ನನ್ನ ಅಣ್ಣ ಮನೆಯಲ್ಲಿ ಇಲ್ಲಾ ಎಂದು ಹೇಳಿದಾಗ, 1 ಮತ್ತು 2ನೇ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಕೈಯಿಂದ ಹೊಡೆದು, ಹಿಡಿದು ಎಳೆದಾಡಿ ಹೊಡೆದಿದ್ದು, 1 ಮತ್ತು 2ನೇ ಆರೋಪಿತರಾದ ನೀವುಗಳು ಸಾಕ್ಷಿ-02 ರವರಿಗೆ ಕೈಯಿಂದ ತಲೆ ಮತ್ತು ಎದೆಗೆ ಹೊಡೆದು ಹಲ್ಲೆ ಮಾಡಿ, ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿ ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ. 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿದ್ದೀರೆಂದು ಹಾಗೂ

ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ, 4ನೇ ಆರೋಪಿಯಾದ ನೀವು ಏಕೋದ್ದೇಶದಿಂದ ಸಾಕ್ಷಿ-01 ರವರ ತಲೆಯ ಜುಟ್ಟನ್ನು ಹಿಡಿದುಕೊಂಡು ಕೈಯಿಂದ ಮೈ ಮೇಲೆ ಹೊಡೆದು ಸಾಕ್ಷಿ-01ರ ಮಾನಕ್ಕೆ ಕುಂದುಂಟು ಮಾಡಿ ಭಾರತ ದಂಡ ಸಂಹಿತೆ ಕಲಂ.354 ಸಹವಾಚಕ ಕಲಂ. 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿದ್ದೀರೆಂದು ಹಾಗೂ

ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ, 4ನೇ ಆರೋಪಿಯಾದ ನೀವು ಏಕೋದ್ದೇಶದಿಂದ ಸಾಕ್ಷಿ-01 ರವರಿಗೆ ” ನಿಮ್ಮ ಅಣ್ಣನನ್ನು ಮುಗಿಸುತ್ತೇನೆ” ಎಂದು ಕೊಲೆ ಬೆದರಿಕೆ ಹಾಕಿದ್ದು, 1 ಮತ್ತು 2ನೇ ಆರೋಪಿತರಾದ ನೀವುಗಳು ಸಾಕ್ಷಿ-02 ರವರಿಗೆ ಕೊಲೆ ಬೆದರಿಕೆ ಹಾಕಿ ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿರುವಿರಿ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಮಳವಳ್ಳಿ.

ದಿನಾಂಕಃ23.11.2023

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ**
**ಸಿ ಸಿ ನಂ.19/2022**

**ಫಿರ್ಯಾದುದಾರರು :- ಹಲಗೂರು ಪೊಲೀಸ್ ಠಾಣೆ**

: ವಿರುದ್ಧ :

**ಆರೋಪಿ :-**

**ಪ್ರಶ್ನೆ:- 1) ಮೇಲ್ಕಂಡಂತೆ ಓದಿ ಹೇಳಿದ ದೋಷಾರೋಪಣೆ ನಿಮಗೆ ತಿಳಿಯಿತೆ?**
**ಉತ್ತರ:-** ತಿಳಿಯಿತು
**ಪ್ರಶ್ನೆ:- 2) ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತೀರಾ?**
**ಉತ್ತರ:** ವಿಚಾರಣೆಯಾಗಬೇಕು

**(ಮೇಲ್ಕಂಡಂತೆ ದೋಷರೋಪಣೆಯನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ್ದು, ಆರೋಪಿ ನೀಡುವ ಉತ್ತರವನ್ನು ಯಥಾವತ್ತಾಗಿ ನಾನೇ ಸ್ವತಃ ಬರೆದುಕೊಂಡಿರುವುದು ನಿಜವೆಂದು ದೃಢಿಕರಿಸುತ್ತೇನೆ.)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
**ದಿನಾಂಕ:23.11.2023** ಮಳವಳ್ಳಿ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ**
**ಸಿ ಸಿ ನಂ.19/2022**

**ಫಿರ್ಯಾದುದಾರರು :- ಹಲಗೂರು ಪೊಲೀಸ್ ಠಾಣೆ**

: ವಿರುದ್ಧ :

**ಆರೋಪಿ :-**

**ಪ್ರಶ್ನೆ:- 1) ಮೇಲ್ಕಂಡಂತೆ ಓದಿ ಹೇಳಿದ ದೋಷಾರೋಪಣೆ ನಿಮಗೆ ತಿಳಿಯಿತೆ?**
**ಉತ್ತರ:-** ತಿಳಿಯಿತು
**ಪ್ರಶ್ನೆ:- 2) ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತೀರಾ?**
**ಉತ್ತರ:** ವಿಚಾರಣೆಯಾಗಬೇಕು

**(ಮೇಲ್ಕಂಡಂತೆ ದೋಷರೋಪಣೆಯನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ್ದು, ಆರೋಪಿ ನೀಡುವ ಉತ್ತರವನ್ನು ಯಥಾವತ್ತಾಗಿ ನಾನೇ ಸ್ವತಃ ಬರೆದುಕೊಂಡಿರುವುದು ನಿಜವೆಂದು ದೃಢಿಕರಿಸುತ್ತೇನೆ.)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
**ದಿನಾಂಕ:23.11.2023** ಮಳವಳ್ಳಿ.